## 19. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದೊಡ್ಲಿಮನೆ, ಹೊಸನಗರ

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಹೊಸನಗರ ಕ್ಲಸ್ಟರ್‌ನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದೊಡ್ಲಿಮನೆ. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 48 ವಿದ್ಯಾರ್ಥಿಗಳು 1 ರಿಂದ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು ಅದರಲ್ಲಿ 19 ವಿದ್ಯಾರ್ಥಿಗಳು ಸ್ವಕಲಿಕೆ, ಸ್ವವೇಗದ ಕಲಿಕೆ, ಸಂತಸ ಕಲಿಕೆಯ ನಲಿ–ಕಲಿಯಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ನಮ್ಮ ಶಾಲಾ ವ್ಯಾಪ್ತಿಯಲ್ಲಿ ಶಾಲೆಬಿಟ್ಟ ಮಕ್ಕಳು ಇರುವುದಿಲ್ಲ ಎಂಬುದು ನಮ್ಮ ಹೆಮ್ಮೆಯ ವಿಷಯವಾಗಿದೆ.

'ಸಮಷ್ಟಿ ಪ್ರಜ್ಞೆ, ಗಮನಾರ್ಹ ಸಾಧನೆ' ಎಂಬ ಧ್ಯೇಯ ವಾಕ್ಯದೊಂದಿಗೆ 4 ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಸಿಯಿಂದ ಹೆಮ್ಮರವಾಗಿ ಬೆಳೆಯುತ್ತಿರುವ ನಮ್ಮ ಶಾಲೆಗೆ ಅಂತೂ–ಇಂತೂ ಹಿಪ್ಪಾಳಕ್ಕಳ ಗುಡ್ಡಕ್ಕೆ ನೀರು ಬಂತು ಎಂಬ ಗ್ರಾಮಸ್ಥರ ಆಡು ಮಾತಿನಂತೆ ಶಾಶ್ವತ ನೀರಿನ ವ್ಯವಸ್ಥೆಯನ್ನು ಜಿಲ್ಲಾ ಪಂಚಾಯ್ತಿ, ಗ್ರಾಮ ಪಂಚಾಯ್ತಿ ಅನುದಾನದಿಂದ ಕಲ್ಪಿಸಲಾಗಿದೆ. ಇದಕ್ಕೆ ಸಹಕರಿಸಿದ ಸರ್ವರನ್ನೂ ಅಭಿನಂದಿಸುತ್ತೇವೆ.

ಕುಗ್ರಾಮವಾದ ಮುತ್ತೂರು–ದೊಡ್ಲಿಮನೆ–ಮಂಡ್ರಳ್ಳಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಸಾಮಾನ್ಯ ಕುಟುಂಬಗಳೇ ಇದ್ದರೂ ಶಾಲೆಗೆ ತಮ್ಮದೇ ಆದ ಸಹಕಾರ ನೀಡುತ್ತಾ, ಸುಸಜ್ಜಿತ ಕಟ್ಟಡ, ವಿಶಾಲವಾದ ಆಟದ ಮೈದಾನ, ಸುತ್ತಲೂ ತೆಂಗಿನ ಸಸಿ, ಹೊಂಗೆಯ ಮರ, ಸುವ್ಯವಸ್ಥಿತ ಶೌಚಾಲಯ, ಅಕ್ಷರದಾಸೋಹ, ಕ್ಷೀರಭಾಗ್ಯ ಯೋಜನೆಗಳ ಯಶಸ್ವಿ ಅನುಷ್ಠಾನ, ಶಾಲಾ ಕಾಂಪೌಂಡ್, ಶಾಲಾ ಪರಿಸರಗಳ ಸ್ವಚ್ಛತೆಗಾಗಿ ಸ್ವಯಂಪ್ರೇರಿತವಾಗಿ ಪೋಷಕರು ಶ್ರಮಿಸುತ್ತಿದ್ದು ಸಂತಸದ ವಿಷಯವಾಗಿದೆ.

ನಲಿ–ಕಲಿ ತರಗತಿಯಲ್ಲಿ ಎಲ್ಲಾ ಅಂಶಗಳನ್ನು ಅಳವಡಿಸಲಾಗಿದ್ದು ಎಲ್ಲಾ ಮಕ್ಕಳಿಗೂ ವಾಲ್ ಸ್ಲೇಟ್, ವ್ಯವಸ್ಥೆ ಕಲ್ಪಿಸಿ ಮಕ್ಕಳ ಬರವಣಿಗೆಗೆ ಅನುಕೂಲ ಮಾಡಲಾಗಿದೆ. ಮಕ್ಕಳು ರಚಿಸಿದ ಕ್ರಾಫ್ಟ್‌ಗಳನ್ನು ಕಲಿಕಾ ಚಪ್ಪರದಲ್ಲಿ ವ್ಯವಸ್ಥಿತವಾಗಿ ಪ್ರದರ್ಶಿಸಲಾಗಿದೆ. ಮಕ್ಕಳೇ ತಮ್ಮ ಪ್ರಗತಿಯನ್ನು ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಪ್ರಗತಿ ನೋಟದಲ್ಲಿ ಗುರುತಿಸಿ ಕಲಿಕೆಯನ್ನು ದಾಖಲಿಸುತ್ತಾರೆ. ವಿಶೇಷವಾಗಿ ಹವಾಮಾನ ನಕ್ಷೆಯನ್ನು ಗೋಡೆಯಲ್ಲಿರುವ ಫಲಕವನ್ನು ನೋಡಿ ಗುರುತಿಸಬಹುದಾಗಿದೆ. ಹವಾಮಾನ ನಕ್ಷೆಯಲ್ಲಿ 2 ನೇ ತರಗತಿ ಮಕ್ಕಳು ಪ್ರತಿದಿನದ ಹವಾಮಾನ ಗುರುತಿಸುವರು. ತಿಂಗಳಲ್ಲಿ ಕ್ರೋಢೀಕರಿಸಿ 3 ನೇ ತರಗತಿ ಮಕ್ಕಳು ಪುಸ್ತಕದಲ್ಲಿ ದಾಖಲಿಸುವರು.



ಕಾರ್ಡುಗಳನ್ನು ಇಡಲು ಅಚ್ಚುಕಟ್ಟಾದ ಬ್ಯಾಗ್‌ನ ವ್ಯವಸ್ಥೆ ಮಾಡಲಾಗುತ್ತಿದೆ ಕಲಿಕೋಪ ಕರಣಗಳನ್ನು ರ್‍ಯಾಕ್‌ನಲ್ಲಿ ಇಡುವ ವ್ಯವಸ್ಥೆ ಮಾಡಲಾಗಿದ್ದು ಮಕ್ಕಳು ತಾವೇ ಅವುಗಳನ್ನು ತೆಗೆದು ಬಳಸಿ ನಂತರ ಅವುಗಳನ್ನು ಅದೇ ಸ್ಥಳದಲ್ಲಿ ಇಡುವಂತೆ ವ್ಯವಸ್ಥೆ ಮಾಡಲಾಗಿದೆ. ನಲಿ–ಕಲಿಯಲ್ಲಿ ಕನ್ನಡ, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳನ್ನು ಚಟುವಟಿಕೆಗಳ ಮೂಲಕ ಕಲಿಸಲಾಗುತ್ತಿದೆ.



ಮಕ್ಕಳು ಕನ್ನಡ ಕಾಪಿ ಬರೆಯುವಂತೆ ಇಂಗ್ಲಿಷ್ ಕಾಪಿಯನ್ನು ಬರೆಯಲು ಪ್ರೋತ್ಸಾಹ ನೀಡಲಾಗುತ್ತಿದೆ. ಇದರಿಂದ ಮಕ್ಕಳು ಬರವಣಿಗೆ ಉತ್ತಮ ಪಡಿಸಿಕೊಳ್ಳುತ್ತಿದ್ದಾರೆ.

## ನಲಿಕಲಿ ತರಗತಿಯ ಉತ್ತಮ ಅಂಶಗಳು:-

ಕಾರ್ಡು, ವಾಚಕ, ಪ್ರಗತಿ ನೋಟಗಳನ್ನು ಕ್ರಮಬದ್ಧವಾಗಿ ಜೋಡಿಸಿರುವುದು ಮತ್ತು ಮಕ್ಕಳಿಗೆ ಎಟುಕುವಂತೆ ಇಟ್ಟಿರುವುದು, ಮಕ್ಕಳೇ ನಿರ್ವಹಿಸುತ್ತಿರುವುದು. ಸರ್ಕಾರಿ ಶಾಲೆ, ಸಂಪೂರ್ಣ ಉಚಿತ. ಎಲ್ಲಾ ಮಕ್ಕಳಿಗೆ ಅಗತ್ಯ ಪರಿಕರಗಳನ್ನು ಶಿಕ್ಷಕವರ್ಗ ಒದಗಿಸುವುದರೊಂದಿಗೆ ಮಕ್ಕಳಿಗೆ ಸರ್ವತೋಮುಖ, ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಸಮವಸ್ತ್ರ, ಟೈ, ಬೆಲ್ಟ್, ಶೂ, ಪಾದರಕ್ಷೆ ಧರಿಸಿ ಖಾಸಗೀ ಶಾಲೆಗೆ ಆಗಮಿಸುವ ರೀತಿಯಲ್ಲಿ ಮಕ್ಕಳು ಚಿಕ್ಕಶಾಲೆ, ಚೊಕ್ಕಶಾಲೆಯಾಗಿ ಉತ್ತಮ ನಿರ್ವಹಣೆಯೊಂದಿಗೆ ಪ್ರಶಂಸೆಗೆ ಪಾತ್ರವಾಗಿದೆ.

ಶಾಲಾ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿಯೇ ಹುಟ್ಟುಹಬ್ಬ ಆಚರಿಸುವುದರೊಂದಿಗೆ ಮಕ್ಕಳಿಗೆ ಸಭೆ, ಸಮಾರಂಭಗಳ ಕಲ್ಪನೆ ಮೂಡಿಸುತ್ತಾ ಪಠ್ಯ ಚಟುವಟಿಕೆಯೊಂದಿಗೆ ಸಹ ಪಠ್ಯ ಚಟುವಟಿಕೆ, ಬ್ಯಾಗ್‌ರಹಿತ ದಿನದಲ್ಲಿ ವಿವಿಧ ಕ್ರಾಫ್ಟ್, ಮಾದರಿ ತಯಾರಿ, ಪ್ರಯೋಗಗಳ ನಿರ್ವಹಣೆಗೆ ಹೆಚ್ಚಿನ ಪ್ರೋತ್ಸಾಹ ನೀಡುವುದರೊಂದಿಗೆ ಮಕ್ಕಳ ಜೀವನ ಕೌಶಲ ವೃದ್ಧಿಗೂ ಪ್ರೇರಣೆ ನೀಡುತ್ತಿರುವುದು ಸಂತಸದ ವಿಷಯವಾಗಿದೆ. ಶಿಕ್ಷಕರ, ಎಸ್‌ಡಿಎಂಸಿ, ಪೋಷಕರ ಸಹಕಾರದಿಂದ ಶಾಲೆ ಅಭಿವೃದ್ಧಿಯತ್ತ ಸಾಗುತ್ತಿದೆ ಎಂಬುದು ಸಂತಸದ ವಿಷಯವಾಗಿದೆ.

ಜ್ಞಾನ ದೇಗುಲವಿದು, ಕೈಮುಗಿದು ಒಳಗೆ ಬಾ ಎಂಬ ಧ್ಯೇಯದೊಂದಿಗೆ ಅರಳುವ ಮೊಗ್ಗಿಗೆ ಭರವಸೆಯ ಬೆಳಕಾಗೋಣ ಎಂಬಂತೆ ನಲಿಕಲಿ ವಿದ್ಯಾರ್ಥಿಗಳು ತರಗತಿ ಪ್ರವೇಶಿಸುತ್ತಿದ್ದಂತೆಯೇ ಹವಾಮಾನ ನಕ್ಷೆ, ಪ್ರಗತಿ ನೋಟ, ಗುಂಪು ಚಲನೆ, ಅಗತ್ಯ ಕಲಿಕಾ ಸಾಮಗ್ರಿ ಸಂಗ್ರಹಣೆ, ಅಭ್ಯಾಸ ಪುಸ್ತಕ, ನನ್ನ ಸಾಧನೆ ಮುಂತಾದ ಸ್ವವೇಗದ ಕಲಿಕೆ, ಸ್ವಕಲಿಕೆ, ಸಂತಸದ ಕಲಿಕೆ, ಬಹುಹಂತದ ಕಲಿಕೆ, ಬಹುವರ್ಗದ ಕಲಿಕೆಯು ಸುಲಲಿತವಾಗಿ ನಿರ್ವಹಣೆಯಾಗುತ್ತಿದ್ದು, ಭಾಷೆ, ಗಣಿತ, ಪರಿಸರ ಅಧ್ಯಯನ ವಿಷಯಗಳ ಸಾಮರ್ಥ್ಯಗಳನ್ನು ಗ್ರಹಿಸುತ್ತಾ, ಹಸ್ತಾಕ್ಷರ ಅತ್ಯುತ್ತಮವಾಗಿದ್ದು ಭೇಟಿ ನೀಡಿದ ಅಧಿಕಾರಿಯವರ ಪ್ರಶಂಸೆಗೆ ಪಾತ್ರವಾಗಿದೆ. ಈ ಸಮುದಲ್ಲಿ ಅವರು ನೀಡಿದ ಸಲಹೆ ಸೂಚನೆಗಳ ಅನುಷ್ಠಾನವು ಶಾಲಾಭಿವೃದ್ಧಿಗೆ ಸಹಕಾರಿಯಾಗಿದೆ.

## ವಿಶಿಷ್ಟವಾದ ಅಂಶಗಳು:-

- ಶೈಕ್ಷಣಿಕ ಯೋಜನೆಗಳಾದ ಸಮವಸ್ತ್ರ, ಶೂ, ಸಾಕ್ಸ್, ಪಠ್ಯಪುಸ್ತಕ, ಪ್ರೇರಣಾ, ಅಕ್ಷರದಾಸೋಹ, ಕ್ಷೀರಭಾಗ್ಯ ಯೋಜನೆಗಳ ಯಶಸ್ವಿ ಅನುಷ್ಠಾನ.
- ಶಾಲಾ ಮಂತ್ರಿಮಂಡಲ, ಮೀನಾತಂಡ, ಗ್ರಂಥಾಲಯಗಳ ಪ್ರಯೋಗಗಳ ವ್ಯವಸ್ಥಿತ ನಿರ್ವಹಣೆ

- ❖ ಮಕ್ಕಳ ಕೃತಿ ಸಂಪುಟಗಳ ನಿರ್ವಹಣೆ, ಪ್ರದರ್ಶನ.
- ❖ ಎಲ್ಲಾ ಕೊಠಡಿಗಳ ಫೆನಲ್‌ಬೋರ್ಡ್, ವಾಲ್‌ಸ್ಲೇಟ್‌ಗಳ ಕಾಯ್ದಿರಿಸಿದ ಸ್ಥಳದ ಸದ್ಬಳಕೆ
- ❖ ಮಕ್ಕಳಿಗೆ ಉತ್ತಮ ಆಸನ ವ್ಯವಸ್ಥೆ, ಪರಿಕರಗಳ ಜೋಡಣೆ
- ❖ ವಿವಿಧ ಮಾದರಿಗಳು/ಕಾಗದದ ಕ್ರಾಪ್ಟ್‌ಗಳ ಸ್ಥಳದಲ್ಲೇ ತಯಾರಿ.
- ❖ ಹೊಂಗೆ ಮರದ ನೆರಳಿನಲ್ಲಿ ಹಂಗಿಲ್ಲದ ಕಲಿಕೆ.
- ❖ ಬೆಳಗಿನ ಪ್ರಾರ್ಥನೆಯೊಂದಿಗೆ ಸಾಮಾನ್ಯ ಜ್ಞಾನದ ಅರಿವು, ದಿನಕ್ಕೊಂದು ನವೀನತೆ.
- ❖ ಬುಕ್-ಬ್ಯಾಂಕ್ ವ್ಯವಸ್ಥೆ, ಮಕ್ಕಳಿಂದಲೇ ನಿರ್ವಹಣೆ.
- ❖ ಮಕ್ಕಳಿಂದಲೇ-ಮಕ್ಕಳಿಗಾಗಿ ವ್ಯಾಪಾರ ನಿರ್ವಹಣೆ (ಶಿಕ್ಷಕರ ಪ್ರೋತ್ಸಾಹ).
- ❖ ಶಾಲಾ ಪರಿಸರ ಶುಚಿತ್ವಕ್ಕೆ ಮಕ್ಕಳ ಉತ್ಸುಕತೆ, ಆದ್ಯತೆ.
- ❖ ಇಡಿಯಿಂದ-ಮುಡಿವರೆಗೆ ಶುಚಿತ್ವ ಪರಿಕರಗಳ ಬಳಕೆ ಹಾಗೂ ವ್ಯವಸ್ಥಿತ ನಿರ್ವಹಣೆ.
- ❖ ನಲಿ-ಕಲಿ ಕೊಠಡಿಯಲ್ಲಿ ಕಲಿಕೋಪಕರಣಗಳ ವಿಷಯವಾರು ಜೋಡಣೆ ಸದ್ಬಳಕೆ.
- ❖ ಆಕರ್ಷಣೀಯ ಕಲಿಕಾ ಚಪ್ಪರದ ಸಂಪೂರ್ಣ ಸದ್ಬಳಕೆ.
- ❖ ವಾಚಕ, ಕಾರ್ಡ್-ಗಳ ವ್ಯವಸ್ಥಿತ ಜೋಡಣೆ ಹಾಗೂ ನಿರ್ವಹಣೆ.
- ❖ ಆಕರ್ಷಣೀಯ ವಾಲ್‌ಸ್ಲೇಟ್‌ನಲ್ಲಿ ಮಕ್ಕಳ ಆಕರ್ಷಣೀಯ ಸುಂದರ ಬರವಣಿಗೆ.
- ❖ ಅನುದಾನಗಳ ವ್ಯವಸ್ಥಿತ, ಪಾರದರ್ಶಕ ನಿರ್ವಹಣೆ.
- ❖ ಯೋಗಾಸನ, ಭಜನೆ, ಒಳಾಂಗಣ, ಹೊರಾಂಗಣ ಕ್ರೀಡೆಗಳ ಅಭ್ಯಾಸ.

ಸ್ವಾಮಿ ವಿವೇಕಾನಂದರ ಧ್ಯೇಯ ವಾಕ್ಯದಂತೆ ಯುವ ಪಡೆಗೆ ಶಕ್ತಿ ತುಂಬಿದಾಗ ಮಗುವಿನ ಕೌಶಲವು ಪ್ರಜ್ವಲಿಸುವುದು ಎಂಬಂತೆ ಶಿಕ್ಷಕರು, ಮಕ್ಕಳ ಕಲಿಕೆಗೆ ನವನವೀನ ವಿಧಾನಗಳೊಂದಿಗೆ ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಪ್ರಶಂಸನೀಯ, ಹಳ್ಳಿಯ ಸುಂದರ ಚಿಕ್ಕ-ಚೊಕ್ಕ ಆಕರ್ಷಣೀಯ ಶಾಲೆ ಇದಾಗಿದೆ ಎಂಬುದು ಹೆಮ್ಮೆಯ ವಿಷಯ.

ಕುಗ್ರಾಮದಲ್ಲಿ ದೀಪದಂತೆ ಪ್ರಜ್ವಲಿಸುತ್ತಿರುವ ಈ ಶಾಲೆಯು ಶಿಕ್ಷಕ-ಮಕ್ಕಳ-ಪೋಷಕರ ಸಹಭಾಗಿತ್ವದಲ್ಲಿ ನಿರ್ವಹಣೆಯಾಗುತ್ತಿದ್ದು ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಮಾದರಿ ಶಾಲೆಯಾಗಿದೆ.

